## ‘ಗಲ್ಲಿ’ ಸಿನಿಮಾ!

ಭಾವನಾ ಪ್ರಧಾನ ನಟ ನೀನಾಸಂ ಸತೀಶ್ ಹಾಗೂ ಸಾಹಸ ಪ್ರಧಾನ ಚಿತ್ರಗಳ ನಿರ್ದೇಶಕ ರವಿ ಶ್ರೀವತ್ಸ ಒಟ್ಟಾಗಿ ಕೆಲಸ ಮಾಡಿದರೆ ಹೇಗಿರುತ್ತದೆ? ಈ ಕುತೂಹಲಕ್ಕೆ ಉತ್ತರ – ‘ಟೈಗರ್ ಗಲ್ಲಿ’.

ಶೀರ್ಷಿಕೆಯ ಮೂಲಕವೇ ಕುತೂಹಲ ಹುಟ್ಟುಹಾಕುವಂತಿರುವ ‘ಟೈಗರ್ ಗಲ್ಲಿ’ ಸತೀಶ್ ಅವರನ್ನು ವಿಭಿನ್ನವಾಗಿ ಚಿತ್ರಿಸಿದೆಯಂತೆ. ಸತೀಶ್‌ರ ಅಮಾಯಕತೆ, ತುಂಟತನಗಳನ್ನು ಉಳಿಸಿಕೊಂಡು, ಅವರನ್ನು ಮಾಸ್‌ಲುಕ್‌ನಲ್ಲಿ ತೋರಿಸುವ ಪ್ರಯತ್ನವನ್ನೂ ನಿರ್ದೇಶಕರು ಮಾಡಿದ್ದಾರೆ. ರವಿ ಶ್ರೀವತ್ಸ ಅವರ ‘ಮಾದೇಶ’ ಚಿತ್ರದ ಮೂಲಕ ಸತೀಶ್ ಚಿತ್ರರಂಗಕ್ಕೆ ಪರಿಚಿತಗೊಂಡಿದ್ದರು. ಈಗ ಅದೇ ನಿರ್ದೇಶಕರ ಗರಡಿಯಲ್ಲಿ ಅವರು ನಾಯಕನಾಗಿ ನಟಿಸಿದ್ದಾರೆ.

ಹಿರಿಯ ನಿರ್ಮಾಪಕ ಎನ್. ಕುಮಾರ್ ಅವರ ಪುತ್ರ ಯೋಗೇಶ್ ಕುಮಾರ್ ಪ್ರಮುಖ ಪಾತ್ರವೊಂದರಲ್ಲಿ ನಟಿಸಿರುವುದು ಚಿತ್ರದ ಮತ್ತೊಂದು ವಿಶೇಷ. ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಅವರು ನಟಿಸಿದ್ದು, ‘ಗಲ್ಲಿ’ಯ ಮೂಲಕ ಚಿತ್ರರಂಗದಲ್ಲಿ ನೆಲೆಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ನಿರ್ದೇಶಕ ಶಿವಮಣಿ ಚಿತ್ರದ ಮತ್ತೊಂದು ಆಕರ್ಷಣೆ. ನಿರ್ದೇಶನದ ಜೊತೆಗೆ ನಟನೆಯನ್ನೂ ಗಂಭೀರವಾಗಿ ಪರಿಗಣಿಸಲು ಉದ್ದೇಶಿಸಿರುವ ಅವರು, ಈ ಚಿತ್ರದಲ್ಲಿ ಖಳನಟನ ಪಾತ್ರವನ್ನು ಪೋಷಿಸಿದ್ದಾರೆ.

ಪೂಜಾ ಲೋಕೇಶ್, ಭಾವನಾ ರಾವ್, ರೋಶನಿ ಪ್ರಕಾಶ್, ಬಿ.ಎಂ. ಗಿರಿರಾಜ್ ಹಾಗೂ ಅಯ್ಯಪ್ಪ ಪಿ. ಶರ್ಮ ತಾರಾಗಣದಲ್ಲಿರುವ ಪ್ರಮುಖರು. ಮ್ಯಾಥ್ಯೂ ರಾಜನ್ ಛಾಯಾಗ್ರಹಣ ಹಾಗೂ ಶ್ರೀಧರ್ ಸಂಭ್ರಮ್ ಸಂಗೀತ ಚಿತ್ರಕ್ಕಿದೆ.






## ಭಾವುಕತೆಯಿಂದ ಹೊಸ ಕಥೆಯತ್ತ...

ನಟ ಅಜಯ್ ರಾವ್ ಧೈರ್ಯ ಮಾಡಿದ್ದಾರೆ. ಇಮೇಜ್ ಬದಲಿಸಿಕೊಳ್ಳುವ ಹಾಗೂ ಹೊಸ ಬಗೆಯ ಪಾತ್ರವನ್ನು ನಿರ್ವಹಿಸುವ ಧೈರ್ಯವದು. ಭಾವುಕ ಪಾತ್ರಗಳ ಇಮೇಜ್‌ನಿಂದ ಹೊರಬರುವ ಅವರ ಹಂಬಲಕ್ಕೆ ‘ಧೈರ್ಯಂ’ ಚಿತ್ರದ ಪಾತ್ರ ಇಂಬುಕೊಟ್ಟಿದೆ.

ಶಿವ ತೇಜಸ್ ನಿರ್ದೇಶನದ ‘ಧೈರ್ಯಂ’ ಚಿತ್ರದ ನಾಯಕನ ಪಾತ್ರಕ್ಕೆ ಕೊಂಚ ನೆಗೆಟಿವ್ ಶೇಡ್ ಕೂಡ ಇದೆ. ಇಂಥ ಪಾತ್ರವನ್ನು ನಿರ್ವಹಿಸಿದ ಸಮಾಧಾನ ಅಜಯ್‌ಗಿದ್ದರೂ, ಹೊಸ ರೂಪದಲ್ಲಿ ಪ್ರೇಕ್ಷಕರನ್ನು ತನ್ನನ್ನು ಹೇಗೆ ಸ್ವೀಕರಿಸುತ್ತಾರೋ ಎನ್ನುವ ಅಳುಕು ಕೂಡ ಅವರಿಗಿದೆ. ಅಜಯ್ ನಟನೆಯ ಬಗ್ಗೆ ನಿರ್ದೇಶಕರಿಗೆ ಸಮಾಧಾನವಿದೆ. ‘ಇದು ಯುವಜನರಿಗೆ ಪ್ರೇರಣೆ ನೀಡುವ ಸಿನಿಮಾ. ಧೈರ್ಯವೊಂದಿದ್ದರೆ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವ ನಂಬಿಕೆ ಮೂಡಿಸುವ ಸಿನಿಮಾ’ ಎನ್ನುವ ಅವರ ಮಾತಿನಲ್ಲಿ, ರಂಜನೆಯ ಜೊತೆಗೆ ಸಾಮಾಜಿಕ ಕಾಳಜಿಯ ರೂಪದಲ್ಲೂ ತಮ್ಮ ಚಿತ್ರಕ್ಕೆ ಮಹತ್ವವಿದೆ ಎನ್ನುವ ಇಂಗಿತವಿದೆ.

ಅದಿತಿ ಪ್ರಭುದೇವ ಚಿತ್ರದ ನಾಯಕಿ. ‘ಧೈರ್ಯಂ’ ಅವರಿಗೆ ನಟನೆಯ ಮೊದಲ ಪಾಠಶಾಲೆ. ಚಿತ್ರದ ಕಥೆ ಕೇಳಿದಾಗಲೇ ಪುಳಕಿತರಾಗಿದ್ದ ಅವರಿಗೆ, ಆ ಎಕ್ಸೈಟ್‌ಮೆಂಟ್ ಸಿನಿಮಾ ತೆರೆಕಾಣುವ ಸಂದರ್ಭದಲ್ಲೂ ಉಳಿದಿದೆ. ‘ಈ ಸಿನಿಮಾದ ಮೂಲಕ ಹೊಸ ಕುಟುಂಬವೊಂದು ತಮಗೆ ದೊರಕಿದೆ’ ಎನ್ನುವ ಖುಷಿ ಅವರದು.

ಹಿರಿಯ ನಟ ಹೊನ್ನವಳ್ಳಿ ಕೃಷ್ಣ ಚಿತ್ರದಲ್ಲಿ ಅಜಯ್‌ಗೆ ತಂದೆಯಾಗಿ ನಟಿಸಿದ್ದಾರೆ. ಈ ಸಿನಿಮಾ ಅಜಯ್‌ಗೆ ಯಶಸ್ಸು ತಂದುಕೊಡುವುದು ನಿಶ್ಚಿತ ಎನ್ನುವುದು ಅವರ ಅನಿಸಿಕೆ.

ಶೇಖರ್ ಚಂದ್ರು ಛಾಯಾಗ್ರಹಣ ಚಿತ್ರಕ್ಕಿದೆ. ಎಮಿಲ್ ಸಂಗೀತ ಸಂಯೋಜನೆಯ ಹಾಡುಗಳ ಧ್ವನಿಮುದ್ರಿಕೆ ಕಳೆದ ವಾರ ಬಿಡುಗಡೆಗೊಂಡಿದೆ.

■ ರಘು